ತನ್ನ ಪಾಡಿಗೆ ತಾನು ಉಳಿಯತೊಡಗಿದ. ಸಮಸ್ಯೆ ಬಿಗಡಾಯಿಸಿದ್ದು ಯಾವಾಗೆಂದರೆ, ನದಿ ದಡದ ಮ್ಯಾಲಿದ್ದ ಬೆಟ್ಟ ಏರಿ ಅಲ್ಲೇ ಕಾಲಕಳೆಯತೊಡಗಿದ. ಕುರುಬರು ನೋಡಿ ಬಂದು ಹೇಳಿದಾಗ ಮಲ್ಲಿಕಾರ್ಜುನಪ್ಪನ ಎದೆ ಒಡೆದು ಹೋದಂತಹ ಸಂಕಟಕ್ಕೆ ಈಡಾದ. ಸ್ವತಃ ಹಿರಿಮಕ್ಕಳನ್ನು ಕಳಿಸಿದ. ಆದೀಶನನ್ನು ಕರೆತಂದು ಮನೆ ಸೇರಿಸಿದರು. ಅಂದಿನಿಂದ ಮಲ್ಲಪ್ಪ, ಇನ್ನ ಮ್ಯಾಲೆ ಮಗನ ಬಗ್ಗೆ ಯಾರೂ ಏನೂ ಮಾತಾಡಬಾರದು ಎಂದು ಕಟ್ಟಪ್ಪಣೆ ಮಾಡಿ, ತಾತನನ್ನು ಕರೆ ಕಳಿಸಿದ್ದ. ತಾತ ಬಂದ ಮ್ಯಾಲೆ ಎಲ್ಲ ವಿಷಯ ಹೇಳಿ ತಪ್ಪಾಯ್ತು ಕ್ಷಮಿಸು ತಂದೆ. ಇನ್ನ ಮ್ಯಾಲೆ ನಾವು ಮಗನ ಮಾತು ನಡಸ್ತೇವಿ. ತಾತ, ಶಿವಸಂಗಪ್ಪ ಯಜಮಾನನ್ನು ಒಪ್ಪಿಸುವ ಜವಾಬ್ದಾರಿ ನಿನ್ನದು. ಒಪ್ಪಿದರೆ ಸಾಕು. ಮನೆಮಂದಿ ಬಂದು ಹೋಳಿಗೆ ಉಂಡು ಬರ್ತೇವಿ. ಶಿವಗೀತಾಳನ್ನು ನಮ್ಮ ಸೊಸೆಯಾಗಿ ಮನೆ ತುಂಬಿಸಿಕೊಳ್ತೇವಿ' ಎಂದು ಹೇಳಿದ ಮ್ಯಾಲೆ ಶಿವಮಲ್ಲಯ್ಯ ತಾತ ಕಲ್ಯಾಣಪುರಕ್ಕೆ ಬಂದು ಶಿವಸಂಗಪ್ಪನ ಒಪ್ಪಿಗೆ ಪಡೆದು, ಆದೀಶ-ಶಿವಗೀತಳ ಮದುವೆಯನ್ನು ಬಸವತತ್ತ್ವದ ಆಧಾರದಲ್ಲಿ ಬಸವ ಜಯಂತಿಯ ದಿನ ನೆರವೇರಿಸಲು ನಿರ್ಧರಿಸಿ, ಮಲ್ಲಪ್ಪನನ್ನು, ಮನೆ ಮಂದಿಯನ್ನು ಕರೆಸಿ ಗೌರವಿಸಲಾಗಿತ್ತು... ಕಲ್ಯಾಣದ ದೊಡ್ಡಮನೆಯಲ್ಲಿ.

* * *

ನಡುಹಗಲು ಸರಿದು ಎರಡು ತಾಸು ಮ್ಯಾಲ್ಯಾಗಿತ್ತು. ಶಿವಸಂಗಪ್ಪ, ಶಿವಮಲ್ಲಯ್ಯ ತಾತ ಅನ್ನ, ನೀರಿನ ಖ್ಯಾಲಯಿಲ್ಲದೆ ಕೊಠಡಿಯಲ್ಲಿ ಆರಾಮ ಕುರ್ಚಿಯಲ್ಲಿ ಕುಂತಿದ್ದರು.

ಶಿವಸಂಗಪ್ಪನ ಜತೆ, 'ನಾವು ಎಡವಟ್ಟು ಮಾಡಿಕೊಂಡಿದ್ದೀವೇನು?' ಎಂದು ಈ ಆರೇಳು ತಿಂಗಳಿಂದ ನಡೆಸಿದ ಪ್ರಯತ್ನಗಳನ್ನು ನೆನೆಯುತ್ತ ವಿಮರ್ಶಿಸಿಕೊಂಡು ಇಬ್ಬರು ಬಸವಳಿದಿದ್ದರು. ಮನೆಮಂದಿಯೂ ಸೋತು 'ಈ ಮದಿವೆ ನಡದೀತಾ...?' ಎಂಬ ಸಂಶಯದಲ್ಲಿ ಕುಂತಿದ್ದರು. ಶಿವಮಲ್ಲಯ್ಯ ತಾತ ಚಿಂತಿಸುತ್ತ ಸೋತೆನೆಂಬ ನಿಲುವಿಗೆ ಬಂದಿದ್ದ. 'ಬಸವ, ಕಲ್ಯಾಣದಲ್ಲಿ ನೀನುಂಡ ನೋವಿನ ಮುಂದ ನನ್ನದೇನೇನೂ ಅಲ್ಲ ಬುಡು! ಲೋಕದ ಜನರಲ್ಲಿ ತಿಮಿರವೇ ತುಂಬಿ ತುಳುಕುತ್ತಿದ್ದಾಗ, ದೀವಟಿಗೆಗೆಲ್ಲಿ ಸ್ಥಾನ...?' ಎಂದು ನೊಂದುಕೊಂಡ. ಕಣ್ಣೀರು ಇಳಿದವು...

'ತಾತ, ಅಪ್ಪ, ಬೀಗ್ರು ಬರುವ ಲಕ್ಷಣಗಳು ಕಾಣದಿಲ್ಲ' ಎಂದು ಶಿವಸಂಗಪ್ಪನ ಇಬ್ಬರು ಮಕ್ಕಳು, ಊರುಕೇರಿಯ ಹಿರಿಯರು ಕೊಠಡಿಗೆ ಬಂದು ಹೇಳಿ ಕುಂತರು. ಶಿವಸಂಗಪ್ಪ ತಾತನ ಕಡೆ ನೋಡಿದ. ತಾತ ಅನ್ಯಮನಸ್ಕನಾಗಿ ಕುಂತು, ಒಂದೆರಡು ಗಳಿಗೆ ಕಳೆದ ಮ್ಯಾಲೆ ದಿಗ್ಗನೆದ್ದು 'ಶಿವಬಸವ, ಮಧ್ಯಾಹ್ನದ ಮದುವೆಗಾಗಿ ಮಾಡಿರುವ ಊಟ ಎಲ್ಲರಿಗೂ ಮಾಡಿಸಿ ಬಿಡ್ರಿ. ನಾನೂ, ಸಂಗಪ್ಪ ಬರ್ತೇವಿ. ಉಂಡಮ್ಯಾಲೆ ಏನಂಬೋದು ನಿರ್ಧಾರ ಮಾಡನು' ಎಂದು ಆಜ್ಞಾಪಿಸಿದಂತೆ ಹೇಳಿದ. ಸಾತ್ವಿಕ ಸಿಟ್ಟು ಬಂದಿತೋ ಏನೋ...?

'ಆಯ್ತು! ನಡಿರಿ ಹೋಗಮು' ಎಂದು ಶಿವಬಸವ ಹೇಳಿದ್ದೇ ತಡ ಕೊಠಡಿಯಿಂದ ಬಂದವರೆಲ್ಲ ಎದ್ದು ಹೋದರು.

ಶಿವಸಂಗಪ್ಪ, ಶಿವಮಲ್ಲಯ್ಯ ಎದ್ದರು. ಕೊಠಡಿಯಿಂದ ಹೊರಬಂದರು. ಶಿವಸಂಗಪ್ಪ ಬಚ್ಚಲ ಮನೆಗೆ ಹೋದ.

ಶಿವಮಲ್ಲಯ್ಯ ತಾತ ಸುಮ್ಮನೆ ನಿಂತುಕೊಂಡ. ತನ್ನೊಳಗೇ ತಲ್ಲೀನನಾದ. ತಕ್ಷಣ ಹಿತ್ತಲಿಗೆ ದಾಪುಗಾಲು ಹಾಕಿ ಬಂದು ನಿಂತ. ದೊಡ್ಡ ಮನೆಯ ಕಲ್ಲಿನ ಪಾಂಟಣಿಗೆಗಳನ್ನು ಏರುತ್ತ ಏರುತ್ತ ಮಾಳಿಗೆ ಮ್ಯಾಲೆ ಬಂದು ನಿಂತ. ಬಿಸಿಲಿಗೆ ಮುಪ್ಪು ಬಂದಿರಲಿಲ್ಲ. ಕಣ್ಣು ತೆರೆದು ನದಿ ದಾರಿ ಕಡೆ ನೋಡಲು ಕಷ್ಟವಾಗುವಷ್ಟು ಬಿಸಿಲಿನ ತಾಪವಿತ್ತು. ತಾತನ ಕಣ್ಣಿನ ದೃಷ್ಟಿ ಅದನ್ನೆಲ್ಲ ಭೇದಿಸಿ ಹೋಯಿತು! ಮೆಲ್ಲಗೆ ಮೆಲ್ಲಗೆ ಬೀನ್‌ಬಾಜಿಯ ಶಬ್ದ ಕೇಳಿತು. ಬಂಡಿಗಳ ಸಾಲು ನದಿ ದಾಟಿ ಕಲ್ಯಾಣಪುರದ ಕಡೆ ಸಾಗಿ ಬರುತ್ತಿತ್ತು. ದಾರಿಯ ತುಂಬ, ದಾರಿಯ ಉದ್ದಕ್ಕೂ ಮದುವೆ ಬಂಡಿಗಳು; ಮದುವೆ ಜನ ಕಲ್ಯಾಣ ಕಾರ್ಯಕ್ಕೆ ಬರುತ್ತಿರುವುದನ್ನು ಕಂಡ ಶಿವಮಲ್ಲಯ್ಯ ತಾತ ಪಾಂಟಣಿಗೆಗಳನ್ನು ಇಳಿಯಲು ಶುರು ಮಾಡಿದ್ದೇ ತಡ 'ಎಮ್ಮವರು ಬೆಸಗೊಂಡರು', 'ಎಮ್ಮವರು ಬೆಸಗೊಂಡರು ಬಸವ, ನಿನ್ನ ದಯೆಯಿಂದ' ಎಂದು ಇಳಿಯುತ್ತ ಬಸವ ಮಂಟಪಕ್ಕೆ ದಾಪುಗಾಲಾಕಿ ಒಂದೇ ಉಸಿರಿಗೆ ಬಂದು ನಿಂತ!

●



